‘ಮಸಿಬಳ್ದು.’

‘ಮೊಕಕ್ಕೆ ಮಸಿಬಳ್ದೂ!’

‘ಮೈಗೆಲ್ಲ ಮೈಗೆಲ್ಲಾ.’

‘ಆಮ್ಯಾಕೆ ಅಳೇ ಎಕ್ಡಾನೂ ಪೋಣ್ಸಿ ಕತ್ಗೆ ಸರಾನೂ ಆಕಿ.’

‘ಔದು ಔದು, ಬೇಸ್ ಇರ್‍ತೈತೆ.’

‘ದ್ಯಾವ್ರ ಸರ ಕದ್ದೋನ್ಗೆ ಎಕ್ಡದ್‌ಸರ, ಬಾಳಸರಿ. ಸರಿ.’

‘ಹ್ಹಹಾ! ಹಂಗೆ ಮಾಡಬೇಕು ಕಳ್ಳನನ್ ಮಗಂಗೆ.’

‘ಮೆರ್‍ವಣ್ಗೆ, ಮೆರ್‍ವಣ್ಗೆ!...’ ದೊಡ್ಡವರು ಮಕ್ಕಳು ಎಲ್ಲರೂ ಕಿರಿಚಿಕೊಳ್ಳುತ್ತಿದ್ದರು.

‘ಹ್ಞಾ, ಹ್ಞಾ! ಆಗಲಿ ಆಗಲಿ. ಅದೇ ಸರಿ, ಹಾಗೇ ಮಾಡೋಣ. ಸ್ವಲ್ಪ ಸುಮ್ಮನಿರಿ’ ಸಾಹುಕಾರರು ಕೈಯೆತ್ತಿ ಕೂಗಿ ತೀರ್ಮಾನ ಹೇಳಿದರು.

ಜನರು ಸ್ವಲ್ಪ ಸುಮ್ಮನಾದರು. ಸಾಹುಕಾರರೂ ಇತರ ಪ್ರಮುಖರೂ ಸ್ವಲ್ಪ ಮಾತಾಡಿಕೊಂಡರು.

‘ಮತ್ತೇ, ಕತ್ತೆಮೇಲಾದರೆ ಕುಳ್ಳಾಗಿರುತ್ತೆ, ಚೆನ್ನಾಗಿ ಎಲ್ಲರಿಗೂ ಕಾಣಿಸೋದಿಲ್ಲ, ಆಯ್ತೆ? ಅದಕ್ಕೆ ಗೊಬ್ಬರದ ಗಾಡಿ ಮೇಲೆ ನಿಲ್ಲಿಸಿ ಮಾಡೋಣ ಮೆರವಣಿಗೆ. ಸರಿತಾನೆ?’ ಸಾಹುಕಾರರು ಜನರನ್ನು ಉದ್ದೇಶಿಸಿ ಹೇಳಿದರು.

‘ಬ್ಯಾಡ, ಬ್ಯಾಡಾ.’

‘ಕತ್ತೆ.’

‘ಹ್ಞೂ, ಕತ್ತೇ...’

ಮತ್ತೆ ಕಿರಿಚಾಟ.

‘ಯಾರೋ ಅದು, ಕತ್ತೇಕತ್ತೇ!’ ಸಾಹುಕಾರರು ಗದರಿಸಿದರು.

ಜನರು ಸುಮ್ಮನಾದರು.

‘ಎಲ್ಲಿ, ಕರೀರೋ ಹಜಾಮನ್ನ’ ಸಾಹುಕಾರರು ಆಜ್ಞಾಪಿಸಿದರು.

‘ಚೌರ್ದೋನು’... ‘ಚೌರ್ದೋನು’... ‘ಚೌರ’, ‘ಚೌರ!’ ‘ಚೌರದ ಮರಿಯಣ್ಣ’, ‘ಮರಿಯಣ್ಣಾ!’ ‘ನಿಂಗಯ್ಯಾ! ಸಾವ್‌ಕಾರ್ರು ಕರೀತವ್ರೆ.. ಸಾವ್ಕಾರ್ರು’ ಕೂಗುಗಳು ರಿಲೇ ಆದವು ಒಬ್ಬರಿಂದ ಇನ್ನೊಬ್ಬರಿಗೆ.

ಅಲ್ಲೇ ನೋಡಲು ಬಂದು ಗುಂಪಿನಲ್ಲಿದ್ದ ಮೂವರು ಕ್ಷೌರಿಕರು ಮುಂದೆ ಬಂದರು. ಮರಿಯಣ್ಣನ ಆಯ್ಕೆಯಾಯಿತು.

ಮೂಗನ ಕಟ್ಟನ್ನು ಬಿಚ್ಚಿ, ನೆಲದ ಮೇಲೆ ಕೂರಿಸಿ. ಬಾಯಿಬಾಯಿ ಬಿಡುತ್ತಿದ್ದವನ ತಲೆ ಗಡ್ಡ ಮೀಸೆಗಳನ್ನು ಬೋಳಿಸಿದ್ದಾಯಿತು. ಪೂಜಾರಪ್ಪನವರು ಗರ್ಭಗುಡಿಯೊಳಗಿನಿಂದ ತಂದುಕೊಟ್ಟ ನಂದಾದೀಪದ ಕಮಟು ಮಸಿಯನ್ನೂ, ಗಾಡಿಯವರು ತಂದ ಕಡಾಣಿ ಮಸಿಯನ್ನೂ ಮೂಗನ ತಲೆ ಮುಖಗಳಿಗೆ ಬಳಿದದ್ದಾಯಿತು. ಗೊಬ್ಬರದ ಗಾಡಿಯ ಪಕ್ಕ ತಡಿಕೆಗಳಿಗೆ ಎರಡು ಬಂಬುಗಳನ್ನು ಕಟ್ಟಿ, ಮೂಗನನ್ನು ಗಾಡಿಯ ಮಧ್ಯೆ ನಿಲ್ಲಿಸಿ ಅಡ್ಡ ಬಂಬುಗಳಿಗೆ ಹಗ್ಗಗಳಿಂದ ಬಿಗಿದದ್ದೂ ಆಯಿತು. ಹಳೆಯ ಹರಿದ ಎಕ್ಕಡಗಳನ್ನು ಜನರು ನಾನು ತಾನೆಂದು ಒದಗಿಸಿ ಕೊಟ್ಟು, ಎಕ್ಕಡಗಳ ಸರವೂ ಮೂಗನನ್ನು ಅಲಂಕರಿಸುವುದಕ್ಕೆ ತಡವಾಗಲಿಲ್ಲ.

ಜನರು ಬಹಳ ಆಸಕ್ತಿ ಉತ್ಸಾಹಗಳಿಂದ ಎಲ್ಲವನ್ನೂ ನೋಡುತ್ತಿದ್ದರು; ಟೀಕೆ – ಟಿಪ್ಪಣಿ ಸಲಹೆ